International Journal of Kannada Research
www.kannadajournal.com

ISSN: 2454–5813
IJSR 2017; 3(1): 89-91
© 2017 IJKS
www.kannadajournal.com
Received: 16-11-2016
Accepted: 17-12-2016

ಶ್ರೀರಾಮ .ಎಂ
ಸಹಾಯಕ ಪ್ರಾಧ್ಯಾಪಕರು
ನ್ಯೂಹಾರಿಜನ್ ಕಾಲೇಜು, ಮಾರತ್ತಹಳ್ಳಿ,
ರಿಂಗ ರೋಡ್ ಬೆಂಗಳೂರು

**Correspondence**
ಶ್ರೀರಾಮ .ಎಂ
ಸಹಾಯಕ ಪ್ರಾಧ್ಯಾಪಕರು
ನ್ಯೂಹಾರಿಜನ್ ಕಾಲೇಜು, ಮಾರತ್ತಹಳ್ಳಿ,
ರಿಂಗ ರೋಡ್ ಬೆಂಗಳೂರು

# "ಪ್ರಶ್ನಿಸಲಿಲ್ಲವೇಕೆ?", ಕಾವ್ಯದಲ್ಲಿ ಒಂದು ಸ್ತ್ರೀವಾದ ಚಿಂತನೆ

**ಶ್ರೀರಾಮ .ಎಂ**

ಕೆ.ಷರೀಪ ರವರ "ಪ್ರಶ್ನಿಸಲಿಲ್ಲವೇಕೆ?" ಕಾವ್ಯದಲ್ಲಿ ಅಂದಿನ ಪುರುಷ ಪ್ರಾಧಾನ ಸಮಾಜದಲ್ಲಿ ಸ್ತ್ರೀಯರಿಗೆ ಯಾವುದೇ ನೈತಿಕ ಸ್ವಾತಂತ್ರ್ಯವಿಲ್ಲದೇ ಇದ್ದುದರಿಂದ ಅನಿವಾರ್ಯವಾಗಿ ಅವರು ಪುರುಷ ಸಮಾಜವನ್ನು ಅವಲಂಭಿಸಬೇಕಾದ ಸನ್ನಿವೇಷ ಉದ್ಭವವಾಗಿತ್ತು. ನಮ್ಮ ಪುರಾಣಗಳಲ್ಲೇ ಹೇಳಿರುವಂತೆ ಹೆಣ್ಣು ಹುಟ್ಟಿದಾಗ ತಂದೆ-ತಾಯಿಗಳ ಆಶ್ರಯ,
ಬೆಳೆದು ಯೌವ್ವನಕ್ಕೆ ಬಂದಾಗ ಗಂಡನ ಆಶ್ರಯ, ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿರಬೇಕೆಂಬ ಸಂಪ್ರದಾಯಗಳ ಕೂಪದಲ್ಲಿ ನೂಕಿದರಿಂದ ಅವರು ತಮ್ಮ ನೈತಿಕತೆಯನ್ನು ಕಳೆದುಕೊಂಡಿದ್ದು ಮಾತ್ರವಲ್ಲದೇ ಪುರುಷರ ದಬ್ಬಾಳಿಕೆ, ಅನ್ಯಾಯ, ಅಕ್ರಮಗಳನ್ನು ಸಹಿಸಿಕೊಂಡು ಬಾಳನ್ನು ಸಾಗಿಸುತ್ತಿರುವುದಲ್ಲದೆ ಅವರೇ ತನ್ನ ಪಾಲಿನ ದೇವರು ಎಂ ದು ಭಾವಿಸಿ. ಪ್ರಾಣಿಗಳ ರೀತಿಯಲ್ಲಿ ಸಹಿಸಿಕೊಂಡಿದ್ದರು. ಹಾಗೆ ಜೈನ ಧರ್ಮದಲ್ಲೂ ಸಹ ಹೆಣ್ಣಿಗೆ ಮೋಕ್ಷವಿಲ್ಲ ಎಂದು ಉಲ್ಲೇಖಿತವಾಗಿದೆ. ಅಂದಿನ ಪುರುಷ ಸಮಾಜದ ವ್ಯವಸ್ಥೆಯನ್ನು ಪ್ರಶ್ನಿಸದ ಪುರಾಣ ಸ್ತ್ರೀಯರಾದ ಚಂದ್ರಮತಿ, ಸೀತೆ, ದ್ರೌಪತಿ, ಹಾಗೂ ಅಹಲ್ಯೆಗೆ ಒದಗಿದ ದುರ್ಗತಿಯನ್ನು ಕಾಣಬಹುದಾಗಿದೆ. ಆದರೆ ಅಂದು ಇವರಿಗೆ ಒದಗಿದ ದುಃಸ್ಥಿತಿಯನ್ನು ಒಂದು ಕ್ಷಣ ಪ್ರಶ್ನಿಸಿದ್ದರೆ ಅವರಿಗೆ ಅಂತಹ ಸ್ಥಿತಿ ಬರುತ್ತಿರಲಿಲ್ಲ. ಈ ನೆಲೆಗಟ್ಟಿನ ಮೂಲಕವೇ ಇಂದಿನ ಪುರುಷ ಪ್ರಧಾನ ಸ ಮಾಜದ ಹಟ್ಟಹಾಸಕ್ಕೆ ಪುರಾಣ ಸ್ತ್ರೀಯರಂತಾಗದೇ ಪ್ರಶ್ನಿಸಬೇಕಾದ ಅನಿವಾರ್ಯತೆ ಇದೆ. ಏಕೆಂದರೆ ಮಹಿಳೆಯ ರು ಪುರುಷರಿಗಿಂತ ಯಾವುದರಲ್ಲೂ ಕಮ್ಮಿ ಇಲ್ಲ. ಅವರಂತೆ ಸರಿ-ಸಮಾನವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಕಾಣಿಸುತ್ತಿ ರುವಾಗ ಈ ಲಿಂಗದ ತಾರತಮ್ಯ ದಬ್ಬಾಳಿಕೆ ಏಕೆ ಬೇಕು? ಅವರಿಗೆ ಪರಿಪೂರ್ಣ ಸ್ವಾತಂತ್ರವನ್ನು ಅವರು ಪಡೆಯು ವ ಮೊದಲೇ ಕೊಡಬೇಕು ಒಂದು ವೇಳೆ ಅವರು ನೈತಿಕತೆಯ ಬಗ್ಗೆ ಪ್ರತಿಭಟನೆಯ ಸ್ವರೂಪದ ಮೂಲಕ ವ್ಯಕ್ತಪಡಿಸಿ ದರೆ. ಪುರುಷ ಪ್ರಧಾನ ಸಮಾಜದ ಪರಿಸ್ಥಿತಿ ಏನಾಗಬಹುದು ಎಂಬುದನ್ನು ಊಹಿಸಿಕೊಳ್ಳಬೇಕಾಗುತ್ತದೆ. ಇತಿಹಾಸ ಹಾಗು ಪುರಾಣದಲ್ಲಿ ಕಾಣಿಸಿಕೊಳ್ಳುವ ಪುರುಷರ ಹೆಸರು ಸುವರ್ಣ ಅಕ್ಷರಗಳಲ್ಲಿ ಶಾಶ್ವತವಾಗಿ ಮುದ್ರಿತ ವಾಗಿ ಅವರ ಕೀರ್ತಿ,ಹಿರಿಮೆ, ಶ್ರೇಷ್ಠತೆಯು ತುಂಬುತ್ತಿದೆ. ಈ ಎಲ್ಲಾ ಹಿರಿಮೆಯ ಹಿಂದೆ ಕಾಣದ ಕೈಯ ರೀತಿಯಲ್ಲಿ ಕೆಲಸ ಮಾಡಿದ ಅಂದರೆ ಪ್ರತಿಯೊಬ್ಬ ಗಂಡಸಿನ ಹಿಂದೆ ಹೆಣ್ಣು ಇರುತ್ತಾಳೆ. ಈಗಿರುವಾಗ ಪುರುಷನ ಎಲ್ಲಾ ಹಿರಿಮೆ ಯ ಹಿಂದೆ ಕಷ್ಟಪಟ್ಟ ಹೆಣ್ಣನ್ನು ಮಾತ್ರ ನೆನೆಯದೇ ತೆರೆಯ ಹಿಂದೆ ಮಡಗಿ ಅವರನ್ನು ಕಷ್ಟದ

ಕೋಟಲೆಗೆ ನೂಕಲಾಗಿ ದೆ.ಇದಕ್ಕೆ ಸಾಕ್ಷಿ ರೂಪವಾಗಿ ಕಾಣಿಸಿಕೊಳ್ಳುವ ಪುರಾಣದ ಸ್ತ್ರೀ ಚಂದ್ರಮತಿಯ ಕಂಡಾಗ ಸ್ಪಷ್ಟವಾಗುತ್ತದೆ.ಹರಿಶ್ಚಂ ದ್ರನ ಧರ್ಮಪತ್ನಿಯಾದ ಇವಳು ತನ್ನ ಗಂಡ ಇಡೀ ತನ್ನ ಸಮಸ್ತ ಸಾಮ್ರಾಜ್ಯವನ್ನು ದಾನದರೂಪದಲ್ಲಿ ಕೊಟ್ಟರೂ ತಾನು ಕೊಡುವ ದಾನಕ್ಕೆ ತೂಗಲಾರದೇ ಸುಳ್ಳನ್ನು ಹೇಳಲಾರದೇ ಸಾಮ್ರಾಜ್ಯವನ್ನು ಬಿಟ್ಟು ಕಾಶಿ ನಗರಕ್ಕೆ ಬರುತ್ತಾನೆ. ಅಲ್ಲಿ ತನ್ನ ಮಾತಿನ ಪ್ರಕಾರವಾಗಿ ಉಳಿದ ಹಣವನ್ನು ನೀಡಲು ಸಂತೆಯಲ್ಲಿ ಪ್ರಾಣಿಗಳನ್ನು ಮಾರಿದ ರೀತಿ ಯಲ್ಲಿ ಮಾರಾಟ ಮಾಡಲು ಮುಂದಾದಾಗ ಕಾಶಿ ನಗರದ ಜನತೆ ಹರಾಜಿನಲ್ಲಿ ಬೆಲೆಯನ್ನು ಕೂಗಿಕೊಂಡರು. ಆ ಕ್ಷಣದಲ್ಲಾದರೂ ಅವಳು ತನ್ನ ಹರಾಜು ಪ್ರಕ್ರಿಯೆಯನ್ನು ಪ್ರಶ್ನಿಸಬಹುದಾಗಿತ್ತು. ಒಂದು ವೇಳೆ ಅವಳು ಪ್ರಶ್ನಿಸುವ ಪ್ರ ಯತ್ನಮಾಡಿದ್ದರೆ ಪುರಾಣದ ಪುಟದಲ್ಲಿ ಹರಿಶ್ಚಂದ್ರನ ಹೆಸರು ದಾಖಲಾಗುತ್ತಿರಲಿಲ್ಲ. ಆದರೆ ಹರಿಶ್ಚಂದ್ರನ ಈ ಸತ್ಯ ಪರಿಪಾಲನೆಯಲ್ಲಿ ಅವನಷ್ಟೆ ಸರಿಯಾದ ಪಾಲನ್ನುಹೊಂದಿದ್ದ ಚಂದ್ರಮತಿಯನ್ನು' ಸತ್ಯವತಿ' ಎಂದು ಕರೆಯಲಾಗಲೇ ಇಲ್ಲ. ಬದಲಾಗಿ ಹರಿಶ್ಚಂದ್ರ-ಸತ್ಯ ಹರಿಶ್ಚಂದ್ರನಾಗಿ ಮೆರೆದನು.

ತ್ರೇತಾಯುಗದಲ್ಲಿ ಕಾಣಿಸುವ ಶ್ರೇಷ್ಠ ಪುರಾಣ ದೇವ ಪುರುಷನೆಂದರೆ 'ರಾಮ'. ರಾಮ ಒಬ್ಬ ಆದರ್ಶ ರಾಜ ಹಾಗೆ ಗಂಡನೂ ಕೂಡ, ಏಕ ಪತ್ನಿ ವ್ರತಸ್ಥ ಎಂದೆಲ್ಲಾ ಬಿರುದು ಕೀರ್ತಿಗಳನ್ನು ಪಡೆದವನು. ಅಲ್ಲದೇ ಅವನ ರಾಜ್ಯ ಯಾವುದೇ ಕುಂದು-ಕೊರತೆಯಿಲ್ಲದೇ ಸುಭೀಕ್ಷವಾಗಿತ್ತು. ಆದ್ದರಿಂದಲೇ ಅದನ್ನು 'ರಾಮ ರಾಜ್ಯ' ಎಂದು ಕರೆಯುತ್ತಿದದ್ದು. ಅಲ್ಲಿ ಅ ರಸನ ಮನೆತನದವರಿಗೆ ಮಾತಿನ ಮೇಲೆ ಎಷ್ಟು ಬೆಲೆ ಇತ್ತೋ ಹಾಗೆ ಸಾಮಾನ್ಯ ಪ್ರಜೆಗಳ ಮಾತಿಗೂ ಅಷ್ಟೇ ಬೆಲೆ ಇತ್ತು. ಹೀಗಿರುವ ಸಮಯದಲ್ಲಿ ಒಂದು ಅಗಸ ದಂಪತಿಯಲ್ಲಿ ವೈಮನಸ್ಸು ಬಂದಾಗ ತನ್ನ ಹೆಂಡತಿಯನ್ನು ತಿರಸ್ಕರಿ ಸುವ ರಭಸದಲ್ಲಿ "ಬಿಟ್ಟ ಹೆಂಡತಿಯನ್ನು ಕಟ್ಟಿಕೊಳ್ಳಲು ತಾನೇನು ರಾಮನೇ?" ಎಂದಾಗ ಈ ಮಾತನ್ನು ಆಲಿಸಿದ ಧೂತ ರಾಮನಿಗೆ ಸುದ್ದಿ ಮುಟ್ಟಿಸಿದ ಅಗಸನ ಮಾತಿಗೆ ಬೆಲೆ ಕೊಡುವ ಸಲುವಾಗಿ ತುಂಬು ಗರ್ಭಿಣಿಯಾಗಿದ್ದ ಸೀತೆ ಯನ್ನು ಅಟ್ಟಿದನು ಕಾಡಿಗೆ. ಅಲ್ಲಿಯೂ ಸಹ ತನ್ನ ಅಂತರಾಳದಲ್ಲಿ ಎಷ್ಟೋ ನೋವು ದುಗುಡವಿದ್ದರೂ ತನ್ನ ಪತಿಯಾ ದ ರಾಮನ ಹೆಸರನ್ನು ಉಳಿಸಲು ಕಾಡಿಗೆ ಹೊರಟಳೇ ವಿನಃ ರಾಮನ ವರ್ತನೆಯನ್ನು ಪ್ರಶ್ನಿಸಲಿಲ್ಲ. ಆದರೆ ಅಂದಿನಿಂ ದ ಇಲ್ಲಿಯತನಕ ರಾಮನನ್ನು ಏಕ ಪತ್ನಿ ವ್ರತಸ್ಥ, ಅವನ ರಾಜ್ಯ ರಾಮ ರಾಜ್ಯ, ಪಿತೃ ಪರಿಪಾಲಕ ಎಂದೆಲ್ಲಾ ಸಂಭೋ ಧಿಸಿ ಕರೆಯುತ್ತೇವೆ. ಇದಕ್ಕೆ ಕಾರಣೀಭೂತಳಾದ ಸೀತೆಯನ್ನು ಮಾತ್ರ ಮರೆಯುತ್ತೇವೆ.

ದ್ವಾಪರ ಯುಗದ ಶ್ರೇಷ್ಠ ಪುರಾಣ ಸ್ತ್ರೀಯರಲ್ಲಿ ಅತ್ಯಂತ ಶ್ರೇಷ್ಠಳೂ, ಪತಿವ್ರತೆಯೂ ಆದ ದ್ರೌಪತಿಯ ಕತೆಯೂ ಸಹ ಹಾಗೆಯೇ. ಪಾಂಡವರು ತನ್ನ ಜೂಜಾಡುವ ಚಟದಿಂದ ಕೌರವರೊಡನೆ ಪಂಧ್ಯವನ್ನು ಏರ್ಪಡಿಸಿ. ಆ ಪಂಧ್ಯದಲ್ಲಿ ತ ನ್ನ ಸಮಸ್ತ ಸಾಮ್ರಾಜ್ಯ, ಸಂಪತ್ತು, ಐಶ್ವರ್ಯ, ಹಾಗು ಸ್ವಂತಃ ತನ್ನನ್ನು ಆ ಪಾಂಡವರು ಕಡೆಗೆ ದ್ರೌಪತಿಯನ್ನೇ ಆಟ ದ ವಸ್ತುವನ್ನಾಗಿಟ್ಟು ಸೋತರು. ಈ ಅವಕಾಶವನ್ನೇ ಕಾಯುತ್ತಿದ್ದ ಕೌರವರು ಆ ಸಭೆಯಲ್ಲಿ ದ್ರೌಪತಿಯ ವಸ್ತ್ರಾಪಹರ ಣ ನಡೆಯುತ್ತದೆ. ಅಲ್ಲಿ ಅವಳು ತನ್ನ ರೋಧನೆಯ ಮಧ್ಯೆ ಮರು ಮಾತನಾಡದೇ ತನ್ನ ಗಂಡಂದಿರ ಧರ್ಮ ಕಾಯ ಲು ತನ್ನನ್ನೇ ಪಣಕ್ಕಿಟ್ಟಿದ್ದರು ಸಹ ಅಲ್ಲಿ ಅವಳು ಪ್ರಶ್ನಿಸಲಿಲ್ಲ. ಆದರೆ ಇಡೀ ಮಹಾಭಾರತದ ಹಿರಿಮೆ ಮಾತ್ರ ಆ ಪಾಂಡವರಿಗೆ.

ಗೌತಮರ ಪತ್ನಿ ಅಹಲ್ಯೆ ಪತಿವ್ರತೆ. ಅವಳು ಅತ್ಯಂತ ಸುಂದರಿ ಎಂದು ತಿಳಿದ ಇಂದ್ರನು ಗೌತಮ ಮುನಿ ಇಲ್ಲದ ಸ ಮಯದಲ್ಲಿ ಗೌತಮನ ವೇಷದಲ್ಲಿ ಬಂದು ಅವಳ ಸಂಗಡ ಪ್ರೀತಿಯಿಂದ ಇದ್ದನು. ಗೌತಮ ಬಂದಾಗ ತಪ್ಪು ಮಾಡಿದ ಅಹಲ್ಯೆಯ ಕಾಮ ವಿಕಾರಕ್ಕೊಳಗಾದುದರೆಂದು ತಿಳಿದು ಕಲ್ಲಾಗುವಂತೆ ಶಾಪ ಕೊಟ್ಟರು. ಇಂದ್ರನಿಗೆ ಮೈಯಲ್ಲಾ ಕ ಣ್ಣಾಗುವಂತೆ ಮಾಡಿದನು. ತಾನು ಮಾಡದೇ ಇರುವ ತಪ್ಪಿಗಾಗಿ ತನ್ನ ಪತಿಯ ಮೂರ್ಖತನಕ್ಕೆ ಸಿಕ್ಕಿ ಅಹಲ್ಯೆ ಶಾಪ ಗ್ರಸ್ಥಳಾದಳು. ಆದರೂ ತನ್ನ ಪತಿಯಾದ ಗೌತಮ ಮುನಿಯ ಶಾಪದ ಬಗ್ಗೆ ಪ್ರಶ್ನಿಸಲಿಲ್ಲ ಅವಳು.

ಈ ಮೇಲೆ ಕಾಣಿಸುವ ಪುರಾಣ ಪ್ರಸಿದ್ಧರಾದ ಚಂದ್ರಮತಿ, ಸೀತೆ, ದ್ರೌಪತಿ, ಹಾಗು ಅಹಲ್ಯೆಯು ತಾವು ಪಟ್ಟ ಪಾಡಿಗೆ ಅವರ ಗಂಡಂದಿರೇ ನೇರವಾಗಿ ಹೊಣೆಯಾಗಿದ್ದರೂ ಶಿಕ್ಷೆ ಮಾತ್ರ ತಾವು ಅನುಭವಿಸಿ ಹಲವು ಕಷ್ಟಗಳನ್ನು ಅನುಭವಿ ಸಿದರು. ಅಂದಿನ ಸಮಾಜದ ಈ ಪುರಾಣ ಸ್ತ್ರೀಯರು ಪುರುಷ ಪ್ರಧಾನ ಸಮಾಜದ ದಬ್ಬಾಳಿಕೆ, ವಿರೋಧಿಸುವ ಧನಿ ಯಾಗದೇ ಇದ್ದುದರಿಂದ ಇವರಿಗೆ ಇಂತಹ ದುಸ್ಥಿತಿಯು ಒದಗಿ ಬಂದಿತ್ತು. ಆ ಒಂದು ಕ್ಷಣ ಇವರೆಲ್ಲರೂ ತಮ್ಮ ಗಂ ಡಂದಿರನ್ನು ಪ್ರಶ್ನಿಸಿದ್ದರೆ ಇಡೀ ಸ್ತ್ರೀ ಸಮಾಜವೇ ಸಂಪೂರ್ಣವಾಗಿ ಬಂದನದಿಂದ ವಿಮುಕ್ತರಾಗುತ್ತಿದ್ದರು.

ಒಟ್ಟಾರೆ ಇಡೀ ಈ ಕಾವ್ಯವನ್ನು ಗಮನಿಸಿದರೆ ಪುರಾಣ ಕಾಲದ ಘಟ್ಟಕ್ಕೂ, ಇಂದಿನ ಆಧುನಿಕ ಕಾಲದ ಘಟ್ಟವನ್ನು ತೌಲನಿಕವಾಗಿ ನೋಡುವ ಪ್ರಯತ್ನ ಮಾಡಿದರೆ ಪುರಾಣ ಸ್ತ್ರೀಯರು ಮಾಡಿದ ತಪ್ಪನ್ನು ಇಂದಿನ ಸ್ತ್ರೀಯರು ಮಾಡ ಬಾರದು. ಏಕೆಂದರೆ ಹೆಣ್ಣು ಕೇವಲ ಮೂಕ ಪ್ರಾಣಿಯಲ್ಲ ಅವಳಿಗೂ ಸಮಾಜದಲ್ಲಿ ತನ್ನದೇ ಅದ ನೈತಿಕತೆಯ ಪ್ರಜ್ಞೆ ಹಾಗು ಸ್ವಾತಂತ್ರ್ಯ ಇದೆ. ಅವಳೂ ಸಹ ಪುರುಷರಿಗಿಂತ ಯಾವುದರಲ್ಲೂ ಕಡಿಮೆ ಏನೂ ಇಲ್ಲ. ಎಲ್ಲಾ ರಂಗದಲ್ಲೂ ಸಮಾನವಾಗಿ ನಿಂತಿದ್ದಾಳೆ. ಆದರೂ ಅವಳ ಮೇಲೆ ದಬ್ಬಾಳಿಕೆ ಹಾಗು ಶೋಷಣೆ ಮಾತ್ರ ನಿಂತಿಲ್ಲ. ಸ್ವತಂತ್ರವಾಗಿ ಪುರುಷರ ಹಂಗಿಲ್ಲದೇ ಬದುಕುವ ಎಲ್ಲಾ ಲಕ್ಷಣಗಳು ಇರುವಾಗ ಪುರಾತನವಾದ ಪುರುಷ ಪ್ರಧಾನ ಸಮಾಜದ ನಂ ಬಿಕೆಗಳನ್ನು ಬದಿಗೊತ್ತಿ ತಮ್ಮ ಮೇಲೆ ಆಗುತ್ತಿರುವ ದೈಹಿಕ ಹಾಗು ಮಾನಸಿಕ ಕಿರುಕುಳದ ವಿರುದ್ದ ಬಂಡಾಯ ಹೇ ಳುವ ಶಕ್ತಿಯಾಗಿ ಅವರು ಬೆಳೆಯಬೇಕು. ಹಾಗೆ ಇಂದಿನ ಆಧುನಿಕ ಸಮಾಜದಲ್ಲಿ ನಡೆಯುತ್ತಿದೆ.